ಕರ್ನಾಟಕ ವಿಧಾನ ಪರಿಷತ್ತು

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1257
02.	ಸದಸ್ಯರ ಹೆಸರು	:	ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
03.	ಉತ್ತರಿಸುವ ದಿನಾಂಕ	:	21.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2016-17, 2017-18ರಲ್ಲಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು-ಗಲಭೆ ಪ್ರಕರಣಗಳಲ್ಲಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಎಷ್ಟು; ಎಷ್ಟು ಪರಿಹಾರ ನೀಡಲಾಗಿದೆ; ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ; ನ್ಯಾಯಾಲಯಗಳಲ್ಲಿ ಶಿಕ್ಷೆ ವಿಧಿಸಲಾಗಿದೆಯೇ; ಖುಲಾಸೆಗೊಂಡ ಪ್ರಕರಣಗಳು ಎಷ್ಟು; (ವಿವರ ಒದಗಿಸುವುದು)	2016, 2017 ಮತ್ತು 2018ರಲ್ಲಿ ಕೋಮು ದ್ವೇಷದಿಂದ ಮಂಗಳೂರು ನಗರದಲ್ಲಿ ಒಟ್ಟು **04** ಹತ್ಯೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು **02** ಹತ್ಯೆ ಪ್ರಕರಣಗಳು ಜರುಗಿವೆ. ಮಾಹಿತಿಯನ್ನು **ಅನುಬಂಧ-ಅ** ರಲ್ಲಿ ಒದಗಿಸಲಾಗಿದೆ.
ಆ)	ಕೋಮು ಗಲಭೆ ಸೃಷ್ಟಿಸಿದವರನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡ ಕ್ರಮಗಳೇನು;	ಕೋಮು ಗಲಭೆಯನ್ನು ಸೃಷ್ಟಿಸುವವರನ್ನು ಹತ್ತಿಕ್ಕಲು ಅಂತಹವರ ವಿರುದ್ಧ ಭದ್ರತಾ ಪ್ರಕರಣ, ರೌಡಿ ಶೀಟ್‌ಗಳು ಮತ್ತು ಗೂಂಡಾ ಕಾಯ್ದೆಯನ್ವಯ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಅವರುಗಳ ಮೇಲೆ ನಿರಂತರ ನಿಗಾ ವಹಿಸಲಾಗಿದೆ.
ಇ)	ಕೋಮು ಗಲಭೆಯಲ್ಲಿ ಭಾಗಿಯಾದ ಆರೋಪಿಗಳ ವಿರುದ್ಧ ಸರ್ಕಾರ ಗೂಂಡಾ ಕಾಯಿದೆಯನ್ನು ದಾಖಲಿಸಲಾಗಿದೆಯೇ; (ದಾಖಲಾಗಿದ್ದಲ್ಲಿ ಅವರುಗಳ ವಿವರ ಒದಗಿಸುವುದು);	ಮಂಗಳೂರು ನಗರದಲ್ಲಿ ಕೋಮು ಗಲಭೆಯಲ್ಲಿ ಭಾಗಿಯಾದ 03 ಆರೋಪಿತರ ವಿರುದ್ಧ ಗೂಂಡಾ ಕಾಯ್ದೆಯನ್ವಯ ಪ್ರಕರಣ ದಾಖಲಿಸಲಾಗಿದೆ. ಭದ್ರತೆ ಮತ್ತು ಗೌಪ್ಯತೆಯ ದೃಷ್ಟಿಯಿಂದ ಸದರಿಯವರ ವಿವರವನ್ನು ಒದಗಿಸಲಾಗಿಲ್ಲ.
ಈ)	ಗೂಂಡಾ ಕಾಯಿದೆಯನ್ವಯ ಎಷ್ಟು ಮಂದಿ ಆರೋಪಿಗಳನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಂಧಿಸಲಾಗಿದೆ; (ವಿವರ ಒದಗಿಸುವುದು)	ಮಂಗಳೂರು ನಗರದಲ್ಲಿ ಒಟ್ಟು 17 ವ್ಯಕ್ತಿಗಳನ್ನು ಬಂಧಿಸಲಾಗಿದೆ. ವರ್ಷವಾರು ವಿವರ ಕೆಳಗಿನಂತಿದೆ. <table><tr><td>ಕ್ರಸ</td><td>ವರ್ಷ</td><td>ಬಂಧಿಸಲಾದವರ ಸಂಖ್ಯೆ</td></tr><tr><td>1</td><td>2016</td><td>6</td></tr><tr><td>2</td><td>2017</td><td>7</td></tr><tr><td>3</td><td>2018</td><td>4</td></tr><tr><td></td><td>ಒಟ್ಟು</td><td>17</td></tr></table> ಬಂಧಿಸಲಾದ ವ್ಯಕ್ತಿಗಳ ವಿವರವನ್ನು ಭದ್ರತೆ ಮತ್ತು ಗೌಪ್ಯತೆಯ ಹಿನ್ನೆಲೆಯಲ್ಲಿ ಒದಗಿಸಲಾಗಿಲ್ಲ. ಉಡುಪಿ ಜಿಲ್ಲೆಯಲ್ಲಿ ಗೂಂಡಾ ಕಾಯಿದೆಯನ್ವಯ ಯಾರನ್ನು ಬಂಧಿಸಿರುವುದಿಲ್ಲ.
ಉ)	ಕೋಮು-ಗಲಭೆ ಪ್ರಚೋದಿಸಿ ಭಾಷಣ ಮಾಡುವವರ ವಿರುದ್ಧ, ಕಾನೂನು ಕೈಗೆ ತೆಗೆದುಕೊಳ್ಳುವ ಸಂಘಟನೆಗಳನ್ನು ಪ್ರಾರಂಭಿಸಿದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಕೋಮು ಗಲಭೆ ಪ್ರಚೋದಿಸಿ ಭಾಷಣ ಮಾಡುವವರ ವಿರುದ್ಧ ಹಾಗೂ ಸಂಘಟನೆಗಳ ಬಗ್ಗೆ ಪರಿಶೀಲನೆ ನಡೆಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಒಇ 15 ಬೆಳಗಾವಿ 2018

ಅನುಬಂಧ – ಅ

ಮಂಗಳೂರು ನಗರ

ಪೊಲೀಸ್ ಠಾಣೆ	ಮೊಕದ್ದಮೆ ಸಂಖ್ಯೆ ಮತ್ತು ಕಲಂ	ಪ್ರಾಣ ಕಳೆದು ಕೊಂಡವರ ಸಂಖ್ಯೆ ಮತ್ತು ವಿವರ	ಪರಿಹಾರದ ವಿವರ	ಬಂಧಿಸಲಾದ ಆರೋಪಿತರ ಸಂಖ್ಯೆ	ಪ್ರಸ್ತುತ ಹಂತ
ಉಳ್ಳಾಲ ಪೊ.ಠಾ.	ಮೊ.ಸಂ. 208/2016 ಕಲಂ 153(ಎ), 302, 201 ಐಪಿಸಿ	01 ರಾಜೇಶ್ ಕೋಟ್ಯಾನ್	5,00,000/-	6	ಎಸ್‌ಸಿ ನಂ. 138/2016 ದಿ:22.12.2018 ರಂದು ವಿಚಾರಣೆಯಲ್ಲಿದೆ
ಉಳ್ಳಾಲ ಪೊ.ಠಾ.	ಮೊ.ಸಂ. 226/2016 ಕಲಂ 143, 147, 148, 341, 323, 326, 307, 153(ಎ), 302 ರೆ/ವಿ 149 ಐಪಿಸಿ ಮತ್ತು 27 ಆರ್ಮ್ಸ್ ಆಕ್ಟ್	01 ಮೊಹಮ್ಮದ್ ಸಫ್ವಾನ್	5,00,000/-	7	ಎಸ್‌ಸಿ ನಂ. 162/2016 ದಿ:23.01.2019 ರಂದು ವಿಚಾರಣೆಯಲ್ಲಿದೆ
ಸುರತ್ಕಲ್ ಪೊ.ಠಾ	ಮೊ.ಸಂ. 02/2018 ಕಲಂ 341, 302, 120(ಬಿ) ರೆ/ವಿ 34 ಐಪಿಸಿ	01 ದೀಪಕ್ ರಾವ್	5,00,000/-	13	ಸಿಸಿ ನಂ. 1965/2018 ದಿ:17.12.2018 ರಂದು ವಿಚಾರಣೆಯಲ್ಲಿದೆ
ಕಾವೂರು ಪೊ.ಠಾ.	ಮೊ.ಸಂ. 02/2018 ಕಲಂ 143, 144, 147, 148, 302 ರೆ/ವಿ 149 ಐಪಿಸಿ	01 ಬಶೀರ್	5,00,000/-	11	ಎಸ್‌ಸಿ ನಂ. 98/2018 ದಿ:27.12.2018 ರಂದು ವಿಚಾರಣೆಯಲ್ಲಿದೆ

ದಕ್ಷಿಣ ಕನ್ನಡ ಜಿಲ್ಲೆ

ಪೊಲೀಸ್ ಠಾಣೆ	ಮೊಕದ್ದಮೆ ಸಂಖ್ಯೆ ಮತ್ತು ಕಲಂ	ಪ್ರಾಣ ಕಳೆದು ಕೊಂಡವರ ಸಂಖ್ಯೆ ಮತ್ತು ವಿವರ	ಪರಿಹಾರದ ವಿವರ	ಬಂಧಿಸಲಾದ ಆರೋಪಿತರ ಸಂಖ್ಯೆ	ಪ್ರಸ್ತುತ ಹಂತ
ಬಂಟ್ವಾಳ ಪೊ.ಠಾ	ಮೊ.ಸಂ 169/2017	01 ಮೃತ ಮಹಮ್ಮದ್ ಅಶ್ರಫ್	ದಿ:28.03.2018 ರಂದು ರೂ. ಐದು ಲಕ್ಷ ಮೊತ್ತದ ಚೆಕ್ ವಿತರಿಸಲಾಗಿದೆ	09	ಎಸ್.ಸಿ ನಂಬರ್ 195/2017 ಮುಂದಿನ ವಿಚಾರಣೆ ದಿ:19.12.2018
ಬಂಟ್ವಾಳ ಪೊ.ಠಾ	ಮೊ.ಸಂ 176/2017	01 ಮೃತ ಶರತ್ ಕುಮಾರ್	ದಿ:28.03.2018 ರಂದು ರೂ. ಐದು ಲಕ್ಷ ಮೊತ್ತದ ಚೆಕ್ ವಿತರಿಸಲಾಗಿದೆ	18	ಎಸ್.ಸಿ ನಂಬರ್ 151/2018 ಮುಂದಿನ ವಿಚಾರಣೆ ದಿ:22.01.2019